# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 8** | **ವಿಷಯ : ದ್ವಿತೀಯ ಭಾಷೆ ಕನ್ನಡ** | **ಅಂಕಗಳು : 50**

**ಸಮಯ : 2 ಗಂಟೆ 30 ನಿಮಿಷ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ________________________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ________________________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | 29 | |
| 10 | | 20 | | 30 | |
| – | | – | | 31 | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ________________________________

ಮೌಲ್ಯಮಾಪಕರ ಸಹಿ : ____________

**I.** **1 ರಿಂದ 16 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(16 x 1 = 16)**

**1.** **ಬುದ್ಧ ದೇವನು "ಈಗ ಸುಖವಾಗಿರುವ ನೀವು '<u>ದುಃಖ</u>' ತಂದುಕೊಳ್ಳುವ ಮಾರ್ಗ ಇದೆ" ಎಂದನು.**

**ಇಲ್ಲಿ ಅಡಿಗೆರೆ ಎಳೆದ ಪದದ ವಿರುದ್ಧ ಪದ :**

A. ಸುಖ B. ತೊಂದರೆ

C. ಕಷ್ಟ D. ನೋವು

ಉತ್ತರ : ☐ ________________________________

**2.** **ಗಾಂಧೀಜಿಯವರಿಗೆ ಶಾಲೆಯಲ್ಲಿ '<u>ವಿದ್ಯಾಭ್ಯಾಸ</u>' ಮಾಡುವಾಗ ಯಾರೊಂದಿಗೂ ಮಾತನಾಡುವ ಧೈರ್ಯವಿರಲಿಲ್ಲ.**
**ಇಲ್ಲಿ 'ವಿದ್ಯಾಭ್ಯಾಸ' ಎನ್ನುವ ಪದವನ್ನು ಬಿಡಿಸಿ ಬರೆದಾಗ :**

A. ವಿದ್ಯಾ+ಭ್ಯಾಸ B. ವಿದ್ಯಾ+ಅಭ್ಯಾಸ

C. ವಿದ್ಯೆಯ+ಅಭ್ಯಾಸ D. ವಿದ್ಯೆ+ಅಭ್ಯಾಸ

ಉತ್ತರ : ☐ ________________________________

**3.** **'<u>ಪಂಡಿತ</u>' ತಾರಾನಾಥರು ಬಡವರ ಉದ್ಧಾರಕ್ಕಾಗಿ ಹಗಲು ರಾತ್ರಿ ದುಡಿದರು.**
**ಇಲ್ಲಿ ಪಂಡಿತ ಎಂಬ ಪದವು :**

A. ಅಂಕಿತ ನಾಮ B. ರೂಢ ನಾಮ

C. ಅನ್ವರ್ಥ ನಾಮ D. ಸರ್ವ ನಾಮ

ಉತ್ತರ : ☐ ________________________________

**4.** **ಮಾನವರ ಜೀವನ ನೋವು–ನಲಿವುಗಳಿಂದ ಕೂಡಿರುತ್ತದೆ.**
**ಇಲ್ಲಿ ನೋವು–ನಲಿವು ಎನ್ನುವ ಪದ :**

A. ಅನುಕರಣಾವ್ಯಯ B. ದ್ವಿರುಕ್ತಿ

C. ಭಾವನಾಮ D. ಜೋಡಿ ನುಡಿ

ಉತ್ತರ : ☐ ________________________________

5. ಅದು ಹರಿಶ್ಚಂದ್ರ ನಾಟಕ. ಅದು ನನ್ನ ಮನಸ್ಸನ್ನು ಸೂರೆಗೊಂಡಿತು. ಅದನ್ನು ಎಷ್ಟು ನೋಡಿದರೂ ನನಗೆ ತೃಪ್ತಿಯೇ ಆಗಲಿಲ್ಲ. ಆದರೆ ಎಷ್ಟು ಸಲ ನೋಡಲು ಅನುಮತಿ ಕೊಟ್ಟಾರು? ಅದರ ಹುಚ್ಚು ನನ್ನನ್ನು ಹಗಲೂ ರಾತ್ರಿ ಬಿಡಲೇ ಇಲ್ಲ. ಲೆಕ್ಕವಿಲ್ಲದಷ್ಟು ಸಲ ನಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿಕೊಂಡೆ. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಇದೇ ಹಗಲೂ ರಾತ್ರಿ ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆ. ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನೂ ಪಡಬೇಕು. ಇದೊಂದೇ ನನ್ನ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶ. ಹರಿಶ್ಚಂದ್ರನ ಕಥೆಯನ್ನು ನಾನು ಅಕ್ಷರಶಃ ನಂಬಿದೆನು.

ಈ ಗದ್ಯವು ಒಳಗೊಂಡಿರುವ ಮೌಲ್ಯ :

A. ನಾಟಕವನ್ನು ನೋಡಿ ಖುಷಿ ಪಡುವುದು.

B. ಕಷ್ಟ ಬಂದಾಗ ಸತ್ಯ ಹೇಳುವುದನ್ನು ಬಿಡಬೇಕು.

C. ಜೀವನದಲ್ಲಿ ಕಷ್ಟ ಬಂದಾಗಲೂ ಸತ್ಯವನ್ನು ಅನುಸರಿಸಿ ನಡೆಯಬೇಕು.

D. ಆಪತ್ತು ಬಂದಾಗ ಸತ್ಯ ಹೇಳದೆ ಸುಳ್ಳು ಹೇಳಿ ಬಂದ ತೊಂದರೆಯಿಂದ ಪಾರಾಗಬೇಕು.

ಉತ್ತರ : ☐ ____________________

6. ಇನ್ಸ್‌ಪೆಕ್ಟರ್ ಮಿ.ಗೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಇವುಗಳ ಪೈಕಿ ಗಾಂಧೀಜಿಯವರು ಬರೆದ ತಪ್ಪು ಪದವಿದು.

A. ಕೆಟಲ್ B. ಕಿಟಲ್

C. ಕೆಟಲು D. ಕಾಟಲ್

ಉತ್ತರ : ☐ ____________________

7. ಗಾಂಧೀಜಿಯವರ ಆತ್ಮಕಥೆ :

A. ಅಣ್ಣನ ನೆನಪು B. ನೆನಪಿನ ದೋಣಿ

C. ನನ್ನ ಸತ್ಯಾನ್ವೇಷಣೆ D. ಮರಳಿ ಮಣ್ಣಿಗೆ

ಉತ್ತರ : ☐ ____________________

**8.** **ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಂದ ಅಪರಾಧಕ್ಕಾಗಿ, ಅಮೇರಿಕೆಯ ಪ್ರಜೆಯಾದ ಪಾಲ್ ಕೆಲೆನ್ ಎಂಬುವವನಿಗೆ ಜಿಲ್ಲಾ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿದೆ! ಸಸ್ಯನಾಶಕವನ್ನು ಮರದ ಮೇಲೆ ಸುರಿದದ್ದು ಗೊತ್ತಾದೊಡನೆಯೇ ಕೆಲೆನ್‌ನನ್ನು ಕಳೆದ ವರ್ಷ ಜೂನ್ ತಿಂಗಳಿನಲ್ಲಿ ಬಂಧಿಸಲಾಗಿತ್ತು.**

**ಪಾಲ್ ಕೆಲೆನ್‌ಗೆ ಶಿಕ್ಷೆಯಾಗಲು ಕಾರಣ :**

A. ಮರವನ್ನು ರಕ್ಷಣೆ ಮಾಡಿದ　　B. ಸಸ್ಯನಾಶಕ ಬಳಸಿ ಮರವನ್ನುಕೊಂದ

C. ಮರವನ್ನು ಕಡಿದು ಹಾಕಿದ　　D. ಮರದ ರೆಂಬೆಗಳನ್ನು ಕತ್ತರಿಸಿದ

ಉತ್ತರ : ______

**9.** **ಇದರ ಮೇಲೆ ಬೇಕಾದರೆ ನೀವು ದಿಮ್ಮಿಗಳ ಬೆಲೆ ಏನಾಗುತ್ತದೆಂಬುದನ್ನು ಲೆಕ್ಕ ಹಾಕಿಕೊಳ್ಳಬಹುದು. ಇದೆಲ್ಲವನ್ನೂ ಮೀರಿದ ಬೆಲೆಯೊಂದಿದೆ. ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ ಎಂಬ ಸತ್ಯವೇ ಆ ಬೆಲೆ! ಈ ಬೆಲೆಯನ್ನು ತೆತ್ತು ನಾವು ಮರಗಳನ್ನು ಕಡಿಯಬೇಕೆ ಎಂಬುದನ್ನು ಈಗ ತೀವ್ರವಾಗಿ ಯೋಚಿಸಬೇಕಾಗಿದೆ.**

**ಗದ್ಯ ಭಾಗ ಹೇಳುವ ಮೌಲ್ಯ :**

A. ಮರದಲ್ಲಿನ ಔಷಧಿಯ ಗುರಿ　　B. ಮರದ ಗಾತ್ರ

C. ಪರಿಸರ ನಾಶ ನಮ್ಮೆಲ್ಲರ ವಿನಾಶ　　D. ಮರದ ಬಣ್ಣ

ಉತ್ತರ : ______

**10.** **ಕೊಟ್ಟಿರುವ ಗದ್ಯವನ್ನು ಓದಿಕೊಂಡು, ಲೇಖಕರ ಪ್ರಕಾರ ಜಗದ ನಿಯಮವನ್ನು ಗುರ್ತಿಸಿ ಬರೆಯಿರಿ.**

ಬದಲಾವಣೆ ಎಂಬ ಜಗದ ನಿಯಮ ಅಂಗಳಕ್ಕೂ ಅನ್ವಯಿಸುತ್ತದೆ. ಸೆಗಣಿಯ ಅಂಗಳವನ್ನು ಇಂಟರ್‌ಲಾಕುಗಳು ನಿಧಾನವಾಗಿ ಬಂಧಿಸುತ್ತಿವೆ. ಮಣ್ಣ ಪಾಗಾರವನ್ನು ಇಟ್ಟಿಗೆ ಸಿಮೆಂಟುಗಳು ತಿಂದು ಹಾಕಿವೆ.

**ಲೇಖಕರ ಪ್ರಕಾರ ಜಗದ ನಿಯಮ :**

A. ಬದಲಾವಣೆ　　B. ಎಲ್ಲರಿಗೂ ಬದುಕಲು ಬಿಡುವುದು

C. ಹಳೆಯ ಸಂಸ್ಕೃತಿಯನ್ನು ಉಳಿಸುವುದು　　D. ಹೊಸದನ್ನು ತಿರಸ್ಕರಿಸುವುದು

ಉತ್ತರ : ______

**11.** **"ಬಣ್ಣ ಬಣ್ಣದ ಹಕ್ಕಿ**
**ಉಲಿಯುತ್ತಿದ್ದವು."**

**ಇಲ್ಲಿ 'ಬಣ್ಣ ಬಣ್ಣ' ಎನ್ನುವ ಪದವು ಈ ವ್ಯಾಕರಣದ ಭಾಗವಾಗಿದೆ.**

A. ಅನುಕರಣಾವ್ಯಯ　　B. ಜೋಡಿ ನುಡಿ

C. ದ್ವಿರುಕ್ತಿ　　D. ನುಡಿಗಟ್ಟು

ಉತ್ತರ : ______


12. 'ಹಕ್ಕಿ' ಪದದ ತದ್ಭವ ರೂಪ :

A. ಅಕ್ಕಿ B. ಹಕ್ಕಿಗಳು

C. ಪಕ್ಷಿ D. ಪಕ್ಕಿ

ಉತ್ತರ : ☐ ____________________

13. ಕೊಟ್ಟಿರುವ ಚಿತ್ರವನ್ನು ಗಮನಿಸಿ ಧಾರ್ಮಿಕ ಕೇಂದ್ರವನ್ನು ಗುರ್ತಿಸಿ ಬರೆಯಿರಿ.



A. ಬಸದಿ

B. ಮಸೀದಿ

C. ಮಂದಿರ

D. ಚರ್ಚು

ಉತ್ತರ : ☐ ____________________

14. "ಇವನಿಗೆಲ್ಲಿ ಭಯವು ಮಗು ಅಭಯಮೂರ್ತಿ ಈತನು
ಭರತ ಚಕ್ರವರ್ತಿ ಇವನ ಅಣ್ಣ"

ಬಾಹುಬಲಿಯ ಅಣ್ಣ :

A. ಅಶೋಕ B. ಧರ್ಮರಾಯ

C. ಪುಲಿಕೇಶಿ D. ಭರತ

ಉತ್ತರ : ☐ ____________________

15. ಮಾತಾಡದೇ ದುಡಿಯುವಾ ಪ್ರೀತಿ ಪಡೆದ ಕರಗಳೇ
ಸೋತು ಬಂದ ಹಕ್ಕಿ ಹಿಂಡು ತೂಗಿಕೊಳ್ಳುವ ನೆಲೆಗಳೇ
ಸಾಲು ಹಸಿರ ಮಾಲೆಯೇ ಜೀವರಸದ ನಾಲೆಯೇ
ಪ್ರೀತಿಯೆಂಬ ನೀತಿ ಹಾಡಿ ಪ್ರಕೃತಿ ಬರೆದ ಓಲೆಯೇ!

ಸಾಲುಗಳು ಇರುವ ಪದ್ಯದ ಆಶಯ :

A. ಗೃಹ ಉಪಯೋಗಕ್ಕಾಗಿ ಮರಗಳ ಬಳಕೆ

B. ಮರಗಳನ್ನು ಬೆಳೆಸುವುದು

C. ಮರದ ಬದುಕಿನಂತೆ ನಮ್ಮ ಬದುಕು ರೂಪಿಸಿಕೊಳ್ಳುವುದು

D. ಮರದ ಮೇಲೆ ವಾಸಿಸುವ ಪ್ರಾಣಿ, ಪಕ್ಷಿಗಳ ಬಗ್ಗೆ ತಿಳಿಯುವುದು

ಉತ್ತರ : ☐ ____________________

16. **ಕುರಿಗಳ ಕಾಯ್ದು ದನಗಳ ಮೇಯಿಸಿ**
**ಹಾಲನು ಕುಡಿಯದೆ ಹೋದವರು**
**ಓದುವ ಬರೆಯುವ ಭಾಗ್ಯವು ಸಿಗದೆ**
**ಗಿಡಗಳ ಜೊತೆಯಲಿ ಬೆಳೆದವರು**

**ಕವಿತೆಯಲ್ಲಿ ಅಡಗಿರುವ ಭಾವ :**

A. ನಾವು ಶಿಕ್ಷಣ ಪಡೆದ ಜನರು
B. ನಾವು ಶಿಕ್ಷಣ ಪಡೆದ ಶ್ರೀಮಂತ ಜನರು
C. ನಾವು ಶಿಕ್ಷಣದಿಂದ ವಂಚಿತರಾದ ಶೋಷಿತ ಜನರು.
D. ಈ ಮೇಲಿನ ಎಲ್ಲವೂ

ಉತ್ತರ : ☐ ______________________________

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **(4 x 1 = 4)**

**ಕೊಟ್ಟಿರುವ ಗದ್ಯ ಭಾಗವನ್ನು ಓದಿಕೊಂಡು ಪ್ರಶ್ನೆ 17 ಮತ್ತು 18ಕ್ಕೆ ಉತ್ತರ ಬರೆಯಿರಿ.**

ವೀಣಾಳ ತಂದೆ ಶ್ರೀನಿವಾಸ ರಾಘವಾಚಾರ್ಯರು ಶ್ರೋತ್ರಿಯರು, ಜನ ಅವರ ಹೆಸರಿನ ಮುಂದೆ ವೇದಬ್ರಹ್ಮ ಎಂದು ಸೇರಿಸಿ ಹೇಳುತ್ತಾರೆ. ಆ ಸಂಸ್ಕೃತ ವಿದ್ವಾಂಸರಿಗೆ ಶ್ರಾವಣಮಾಸ ಬಂತೆಂದರೆ ಬಿಡುವಿಲ್ಲದಷ್ಟು ಉಪನ್ಯಾಸಗಳು. ಅವರನ್ನು ಕಂಡವರೆಲ್ಲಾ ದೇವರನ್ನು ಕಂಡಂತೆ ಶಿರಬಾಗಿ ನಮಸ್ಕರಿಸುತ್ತಾರೆ. ಮಡಿವಂತಿಕೆಯ ಸಂಪ್ರದಾಯ ರಕ್ತಗತವಾಗಿ ಬಂದಿದೆ. ಯಾವುದೋ ಕಾರ್ಯಕ್ರಮಕ್ಕೆ ಬಾಂಬೆಗೆ ತೆರಳಿದ್ದಾರೆ. ಹಾಗಾಗಿ ಆಂಡಾಳಮ್ಮ ಆಸ್ಪತ್ರೆಗೆ ಸೇರಿದಾಗ ಅವರು ಮನೆಯಲ್ಲಿ ಇರಲಿಲ್ಲ.

17. **ಜನರು ರಾಘವಾಚಾರ್ಯರನ್ನು ಏನೆಂದು ಕರೆಯುತ್ತಿದ್ದರು** ?

______________________________

______________________________

18. **ಆಂಡಾಳಮ್ಮ ಆಸ್ಪತ್ರೆಗೆ ಸೇರಿದಾಗ ರಾಘವಾಚಾರ್ಯರು ಮನೆಯಲ್ಲಿರಲಿಲ್ಲ ಏಕೆ** ?

______________________________

______________________________

**ಕೊಟ್ಟಿರುವ ಗದ್ಯವನ್ನು ಓದಿಕೊಂಡು ಪ್ರಶ್ನೆ 19ಕ್ಕೆ ಉತ್ತರ ಬರೆಯಿರಿ.**

ತಾರಾನಾಥರು ಮಹಾಜ್ಞಾನಿಗಳೂ, ದಯಾಳುಗಳೂ, ಧೈರ್ಯವಂತರೂ, ಪರೋಪಕಾರಿಗಳೂ, ಪರರ ಹಿತೈಷಿಗಳೂ, ಆತ್ಮವಿಶ್ವಾಸಿಗಳೂ ಆಗಿದ್ದರು. ಅವರಿಗೆ ಅಸಾಧ್ಯವಾದ ಕೆಲಸವೇ ಇಲ್ಲ. ಅದು ಎಂತಹದೇ ಇರಲಿ, ಸಾಧಿಸುವ ಶಕ್ತಿ ಅವರಲ್ಲಿ ಇತ್ತು. ಒಟ್ಟಿನಲ್ಲಿ ಅವರು ಎಲ್ಲರಿಗೂ ಬೇಕಾಗಿದ್ದರು.

**19.** **ತಾರಾನಾಥರಂತೆ ನಾವು ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಗುಣಗಳಾವುವು** ?

**ಕೊಟ್ಟಿರುವ ಗದ್ಯವನ್ನು ಓದಿಕೊಂಡು ಪ್ರಶ್ನೆ 20ಕ್ಕೆ ಉತ್ತರ ಬರೆಯಿರಿ.**

**ನೊಂದ ಬಯಲುಗಳಿಗೆ**
**ಬೆಂದ ಬೆಟ್ಟಗಳಿಗೆ**
**ಬಾಯಾರಿದ ಕೆರೆ ಬಾವಿ**
**ಹಳ್ಳ ಕೊಳ್ಳಗಳಿಗೆ–**
**ಬರಲಿ ಮಳೆ ಬರಲಿ.**

**20.** **ನೊಂದ ಬಯಲುಗಳು ತಂಪಾಗುವುದು ಯಾವಾಗ** ?

**III. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. (6 x 2 = 12)**

**21. ಕೊಟ್ಟಿರುವ ಚಿತ್ರವನ್ನು ಗಮನಿಸಿ ಅರ್ಥೈಸಿಕೊಂಡು ಕಲಾಂರವರು ಕನಸ್ಸಿನಲ್ಲಿ ಕಂಡ ವ್ಯಕ್ತಿಗಳ ಹೆಸರನ್ನು ಬರೆಯಿರಿ.**



______________________________________________

______________________________________________

______________________________________________

______________________________________________

______________________________________________

**ಕೊಟ್ಟಿರುವ ಗದ್ಯವನ್ನು ಓದಿಕೊಂಡು ಪ್ರಶ್ನೆ 22ಕ್ಕೆ ಉತ್ತರ ಬರೆಯಿರಿ.**

ಹಿತವಾದ ಆ ನೀರವತೆಯ ಮಧ್ಯೆ ಮಹಾತ್ಮಾ ಗಾಂಧಿ ಮಾತನಾಡತೊಡಗುತ್ತಾರೆ– 'ಸ್ನೇಹಿತರೆ, ನಮಗೆ ಕೇಳಿಬರುತ್ತಿರುವ ದಿವ್ಯ ಸಂದೇಶವು ಆ ಸೃಷ್ಟಿಕರ್ತನದು. ಇಲ್ಲಿ ನೆರೆದ ನಾವೆಲ್ಲರೂ ಭೂಗ್ರಹಕ್ಕೆ ಸೇರಿದವರಾಗಿರುವುದರಿಂದ ಇಡೀ ಮಾನವ ಕುಲಕ್ಕೆ ನಾವು ಆ ಸಂದೇಶವನ್ನು ತಲುಪಿಸಬೇಕಾಗಿದೆ. ನಾನಾ ಜಾತಿ–ಜನಾಂಗ, ಮತ–ಧರ್ಮ ಹಾಗೂ ಭಾಷೆಗಳ ಜನರು ಶಾಂತಿ ನೆಮ್ಮದಿಯಿಂದ, ಏಳಿಗೆ ಸಾಧಿಸುತ್ತಾ ಹೇಗೆ ಬಾಳಬಹುದು ಎಂಬುದನ್ನು ನಾವು ತಿಳಿಸಿಕೊಡಬೇಕಾಗಿದೆ. ಆ ದೇವರು ನಮ್ಮೆಲ್ಲರಿಗೂ ವಿಶಿಷ್ಟವಾದುದೇನನ್ನೋ ದಯಪಾಲಿಸಿದ್ದಾನೆ. ಅದನ್ನು ನಾವು ನಮ್ಮ ಸತ್ಕಾರ್ಯಗಳು ಹಾಗೂ ಶ್ರಮದ ಮೂಲಕ ಮಾನವಕುಲಕ್ಕೆ ತಲುಪಿಸಿದ್ದೂ ಆಗಿದೆ. ಆದರೆ, ಅದು ಪರಿಣಾಮ ಬೀರಿದೆಯೇ? ಅದಕ್ಕಾಗಿ ಯಾವುದಾದರೂ ದಿವ್ಯ ಸಂದೇಶ ಅಥವಾ ತತ್ವ ಇದೆಯೇ? ದೈವಿಕ ಸೌಂದರ್ಯವು ಮಾನವನ ಹೃದಯವನ್ನು ಪ್ರವೇಶಿಸುವಂತಾಗಬೇಕು. ಇದು ಸಾಧ್ಯವೇ ?

**22. ಕನಸಿನ ಬಗ್ಗೆ ಕಲಾಂರವರ ಸಂದೇಶವನ್ನು ನಿಮ್ಮ ಮೆಚ್ಚುಗೆಯ ಮಾತುಗಳಲ್ಲಿ ಬರೆಯಿರಿ.**

______________________________________________

______________________________________________

______________________________________________

______________________________________________

______________________________________________

**ಕೊಟ್ಟಿರುವ ಗದ್ಯವನ್ನು ಓದಿಕೊಂಡು ಪ್ರಶ್ನೆ 23ಕ್ಕೆ ಉತ್ತರವನ್ನು ಬರೆಯಿರಿ.**

ಸುಕ್ರಿಯೂ ಶಾಲೆ ಕಲಿತವಳಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾದಾಗ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು ಗದ್ದೆ ಬಯಲನ್ನೆ ಕ್ರೀಡಾಂಗಣವನ್ನಾಗಿಸಿಕೊಳ್ಳುತ್ತಿದ್ದರು. ಅಟ್ಟೆ ಆಟ; ಕಣ್ಣಕಟ್ಟಾಟ; ಹುಳ್ಳಿ ಮಂಡದ ಆಟಗಳಿಗೆ ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು.

**23.** **ಸುಕ್ರಿ ಬಾಲ್ಯದಲ್ಲಿ ಜನಪದ ಆಟವನ್ನು ಹೇಗೆ ಕಲಿತಳು ?**

**ಕೊಟ್ಟಿರುವ ಗದ್ಯವನ್ನು ಓದಿಕೊಂಡು ಪ್ರಶ್ನೆ 24ಕ್ಕೆ ಉತ್ತರ ಬರೆಯಿರಿ.**

ಹಾಡುಗಳು ಕಾಡಿನ ಜೀವಿಗಳೊಂದಿಗಿನ ಹಾಲಕ್ಕಿ ಒಕ್ಕಲ ಹಳೆಯ ಸಂಬಂಧಕ್ಕೆ ಸಾಕ್ಷಿಯಾಗಿವೆ. ಕಾಡಿನ ಜೀವಿಗಳಿಗೆ ನೀರಿಲ್ಲ ಮಳೆರಾಯ ಬೇಗ ಬಾ, ಮಳೆ ತಾ ಎಂದು ಹಾರೈಸುವ ಹಾಡೇ ತಾರ್ಲೆ. ಈ ಹಾಡಿನಲ್ಲಿ ಬೆಳತನಕ ಹಾಡಬಲ್ಲ ಸಾಹಿತ್ಯವಿದೆ. ಜನ ಜೀವನದ ಚಿತ್ರವಿದೆ. ಕೇಳುಗರಿಲ್ಲ ದಾಖಲಿಸುವವರಿಲ್ಲ.

**24.** **ತಾರ್ಲೆ ಕುಣಿತದ ವಿಶೇಷವೇನು ?**

25. ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ।
ನನಕಂದ ಜ್ಯೋತಿಯೇ ಆಗು ಜಗಕೆಲ್ಲ ॥

ಈ ಪದ್ಯಭಾಗದಲ್ಲಿ ತಾಯಿ ತನ್ನ ಮಗು ಯಾವ ಗುಣಗಳಿಂದ ಜಗಕ್ಕೆ ಜ್ಯೋತಿಯಾಗಬೇಕೆಂದು ಬಯಸುತ್ತಾಳೆ ?

______________________________

______________________________

______________________________

______________________________

______________________________

______________________________

26. ಅಕ್ಕ ಇದ್ದರೆ ಬಾ ರೊಕ್ಕ ಇದ್ದರೆ ಸಂತೆ
ಮಕ್ಕಳಿದ್ದರೆ ಮನಿಮಾರು । ಹಡೆದವ್ವ
ನೀ ಇದ್ದರೆ ನಮಗ ಸಾಮ್ರಾಜ್ಯ

ಈ ಪದ್ಯಭಾಗದಲಿ ಜನಪದರು ಭಾವ, ಸಂತೆ, ಹಾಗೂ ಮನೆ ಇವುಗಳ ಇರುವಿಕೆ ಸಾಧ್ಯವಾಗುವುದು ಯಾವಾಗ ಎಂದು ಹೇಳುತ್ತಾರೆ.

______________________________

______________________________

______________________________

______________________________

______________________________

______________________________

**IV.** ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. **(1 x 3 = 3)**

**27.** ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆವು ನಮ್ಮೊಳಗೆ ॥

ಈ ಸಾಲುಗಳಲ್ಲಿ ಅಡಗಿರುವ ಮೌಲ್ಯಗಳನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

**V.** ಸಂದರ್ಭದೊಡನೆ ವಿವರಿಸಿ. **(1 x 3 = 3)**

**28.** ಸಂದರ್ಭದೊಡನೆ ವಿವರಿಸಿ.

"ನದಿಯ ನೀರು, ಮಾನವ ರಕ್ತ ಇವೆರಡರಲ್ಲಿ ಯಾವುದು ಹೆಚ್ಚು ಬೆಲೆಯುಳ್ಳದ್ದು?"
"ಮನುಷ್ಯನ ರಕ್ತ ನದಿ ನೀರಿಗಿಂತ ತುಂಬ ಬೆಲೆಯುಳ್ಳದ್ದು" ಎರಡೂ ಕಡೆಯವರಿಂದ ಉತ್ತರ ಬಂತು.
ಈ ಪಠ್ಯಭಾಗದಲ್ಲಿ ಇರುವ "ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು." ವಾಕ್ಯದ ಸಂದರ್ಭ ಸ್ವಾರಸ್ಯ ಬರೆಯಿರಿ.

**VI.** **ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **(1 x 3 = 3)**

**29.** **ಗೌರವಿಸು ಜೀವನವು** ______________________________

______________________________

______________________________

______________________________ **ಮಂಕು ತಿಮ್ಮ**

**VII.** **ಕೊಟ್ಟಿರುವ ಗದ್ಯ ಭಾಗವನ್ನು ಓದಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.** **(1 x 4 = 4)**

ಮರಗಳು ಪಕ್ಷಿ ಸಂಕುಲಕ್ಕೆ ಆಲಯವಾಗಿವೆ. ರಮ್ಯ ಜಗತ್ತಿಗೆ ತೋರಣವಾಗಿವೆ. ಸೌಂದರ್ಯಕ್ಕೆ ಆಗರವಾಗಿವೆ. ಹೂಗಳಿಗೆ ಜನ್ಮಕೊಡುವ ತಾಯಿಯಾಗಿವೆ. ಆ ಹೂಗಳ ರಸವನ್ನು ಉಣ್ಣಲು ಬರುವ ಪತಂಗ ಪಾತರಗಿತ್ತಿಗಳು ಸಂಭ್ರಮಿಸುತ್ತವೆ. ವಿಜ್ಞಾನಿಗಳ ಪ್ರಕಾರ, ಒಂದು ಮರ ಹತ್ತು ಸಾವಿರ ಜನಕ್ಕೆ ಆಮ್ಲಜನಕ ನೀಡುವ ಜೀವದಾಯಕ ಕೆಲಸ ಮಾಡುತ್ತದೆ. ಮರವು ಮೋಡಗಳನ್ನು ತಡೆದು ಮಳೆ ತರಿಸುವ ವ್ಯವಸ್ಥಾಪಕನಾಗುತ್ತದೆ.

ಮನುಷ್ಯನಿಗೂ ಮರವೇ ಗುರುವಾಗಿ ಪ್ರೀತಿ, ದಾನ, ಸಹಾಯ ಮಾಡುವುದನ್ನು ಕಲಿಸುತ್ತದೆ. ಕಹಿಯನ್ನು ಸಹಿಸಿ ಸಹನೆ ಬೆಳೆಸಿಕೊಳ್ಳುವುದನ್ನು ರೂಢಿಸುತ್ತದೆ.

ಮರವು ತನಗೆ ಕಲ್ಲಿನಿಂದ ಹೊಡೆದವನಿಗೂ ಹಣ್ಣನ್ನು ಕೊಡುತ್ತದೆ; ಕಡಿಯುವ ಕೊಡಲಿಗೂ ಕಾವು ಕೊಡುತ್ತದೆ. ಕಡಿದು ಉರಿಸುವವರಿಗೆ ಅಡುಗೆ ತಯಾರಿಸುವುದಕ್ಕೆ ನೆರವಾಗುತ್ತದೆ. ಹೀಗೆ ತನ್ನ ದೇಹವನ್ನೇ ಮನುಷ್ಯನ ಉಪಯೋಗಕ್ಕಾಗಿ ಮೀಸಲಿಡುವ ಉದಾರಗುಣಕ್ಕೆ ಉದಾಹರಣೆಯಾಗಿ ಅದು ಬದುಕುತ್ತದೆ.

**30.** **ಪ್ರಶ್ನೆಗಳು:**

**ಅ)** **ತನಗೆ ಕೆಡಕು ಬಯಸುವವರಿಗೂ ಮರವು ಉಪಕಾರಿಯಾಗಿದೆ. ಹೇಗೆ ? ವಿವರಿಸಿ.**

______________________________

______________________________

______________________________

______________________________

**ಆ)** **ಮರಗಳು ಮನುಷ್ಯನಿಗೆ ಬಹುಪಯೋಗಿ ಆಗಿವೆ ಹೇಗೆ ?**

______________________________

______________________________

______________________________

VIII. ಪತ್ರ ಲೇಖನ (1 x 5 = 5)

31. ‘ಗೀತಾಂಜಲಿ’ ಎಂಬ ವಿದ್ಯಾರ್ಥಿನಿಯು ತನ್ನ ಅಣ್ಣನ ಮದುವೆಗಾಗಿ ಮೂರು ದಿವಸ ರಜಾ ಕೋರಿ ಶಾಲೆಯ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆದಿದ್ದಾಳೆ. ಅದರಲ್ಲಿ ಕೆಲವು ಅಂಶಗಳು ಬಿಟ್ಟು ಹೋಗಿವೆ. ಅವುಗಳನ್ನು ಭರ್ತಿ ಮಾಡಿ.

ಇಂದ ದಿನಾಂಕ : 20–12–2023

ಗೀತಾಂಜಲಿ

____________________

____________________

____________________

ಗೆ,

____________________

____________________

____________________

ಮಾನ್ಯರೇ,

ವಿಷಯ : ಅಣ್ಣನ ಮದುವೆಗಾಗಿ ಮೂರು ದಿವಸ ರಜಾ ಕೋರಿ ಬರೆದ ಮನವಿ ಪತ್ರ

________________________________________

________________________________________

________________________________________

________________________________________

________________________________________

________________________________________

ವಂದನೆಗಳೊಂದಿಗೆ

ಇಂತಿ,

ತಮ್ಮ ವಿಧೇಯ ವಿದ್ಯಾರ್ಥಿನಿ